ಹಣ ಖರ್ಚಾಗಿಲ್ಲ.

೫) ಪ್ರಶ್ನೆ ಉದ್ಭವಿಸುವುದಿಲ್ಲ.

ಈ) ಲಕ್ಕ ಶೀರ್ಷಿಕೆ ೨೨೧೫ ಕೊಳವೆ ನೀರು ಪೂರೈಕೆ ಯೋಜನೆ ಪುನರ್‌ಶ್ಚೇತನ (ರಾಜ್ಯ)

ಉ) ಹೌದು.

ಊ) ಹೌದು.

ಸೇಡಂ ಮತ ಕ್ಷೇತ್ರದ ಚಿತ್ತಾಪುರ ತಾಲ್ಲೂಕಿನ ಆಲೂರು (ಬಿ) ಹೊಸ ಕೆರೆ ನಿರ್ಮಾಣ

೧೪೦೬ (೨೨೫೬) ಶ್ರೀ ಬಸವಂತರೆಡ್ಡಿ ಮೋತಕಪಲ್ಲಿ (ಸೇಡಂ):- ಮಾನ್ಯ ಸಣ್ಣ ನೀರಾವರಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಗುಲ್ಬರ್ಗ ಜಿಲ್ಲೆಯ ಸೇಡಂ ಮತ ಕ್ಷೇತ್ರದ ಚಿತ್ತಾಪುರ ತಾಲ್ಲೂಕಿನ ಆಲ್ಲೂರು (ಬಿ) ಹೊಸ ಕೆರೆ ನಿರ್ಮಾಣವಾಗುವ ವೇಳೆಯಲ್ಲಿ ಅದರ ಏರಿ (ಕಟ್ಟೆ) ಕುಸಿದುಹೋಗಿ, ಅಪಾಯ ಹಂತದಲ್ಲಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಈ ಕೆರೆ ಕುಸಿದುಹೋಗಿ ಪೂರ್ತಿಯಾಗದೇ ಪ್ರತಿ ವರ್ಷ ಮಳೆಗಾಲದಲ್ಲಿ ನೀರಿನ ಪ್ರವಾಹದಿಂದ ರೈತರ ಭೂಮಿಗಳು ಹಾಗೂ ಬೆಳೆಗಳು ನಷ್ಟವಾಗುವುದು ನಿಜವಲ್ಲವೇ?

ಇ) ನಷ್ಟವಾದರೆ ಆ ರೈತರಿಗೆ ಪರಿಹಾರ ಧನವನ್ನು ನೀಡಲಾಗಿದೆಯೇ?

ಉ) ಈಗಲಾದರೂ ಈ ಕೆರೆಯನ್ನು ಮಳೆಗಾಲದ ಒಳಗಾಗಿ ಪೂರ್ತಿ ಮಾಡಿ, ರೈತರ ಬೆಳೆಗಳಿಗೆ ಅನುಕೂಲ ಮಾಡಬಹುದೇ?

ಶ್ರೀ ಕೆ. ಎಸ್. ಮಲ್ಲಿಕಾರ್ಜುನ ಪ್ರಸನ್ನ (ಸಣ್ಣ ನೀರಾವರಿ ರಾಜ್ಯ ಸಚಿವರು):-

ಅ) ಗಮನಕ್ಕೆ ಬಂದಿದೆ.

ಆ) ಪ್ರವಾಹದಿಂದ ರೈತರ ಭೂಮಿಗಳು ಹಾಗೂ ಬೆಳೆಗಳು ನಷ್ಟವಾಗಿರುವುದು ಸರ್ಕಾರದ ಗಮನಕ್ಕೆ ಬಂದಿರುವುದಿಲ್ಲ.

ಇ) ಪ್ರಶ್ನೆಗೆ ಉತ್ತರಿಸಿರುವುದರಿಂದ ಪ್ರಶ್ನೆ ಉದ್ಭವಿಸುವುದಿಲ್ಲ.

ಉ) ಮಳೆಗಾಲದ ಒಳಗಾಗಿ ಕುಸಿದುಹೋಗಿರುವ ಏರಿ (ಕಟ್ಟೆ)ಯ ಭಾಗದ ಕೆಲಸವನ್ನು ಪೂರ್ಣಗೊಳಿಸುವ ಪ್ರಸ್ತಾವನೆ ಸರ್ಕಾರದ ಪರಿಶೀಲನೆಯಲ್ಲಿದೆ.

ಹಿರೇ ಕೇರೂರು ತಾಲ್ಲೂಕಿನಲ್ಲಿ ಕುಮದ್ವತಿ ನದಿಗೆ ಬ್ಯಾರೇಜ್‌ಗಳನ್ನು ಕಟ್ಟುವುದು

೧೪೧೦ (೨೦೪೭) ಶ್ರೀ ಬಿ. ಹೆಚ್. ಬನ್ನಿಕೋಡ್ (ಹಿರೇಕೆರೂರು):- ಮಾನ್ಯ ಸಣ್ಣ ನೀರಾವರಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ:

ಅ) ಧಾರವಾಡ ಜಿಲ್ಲೆಯ ಹಿರೇಕೆರೂರು ತಾಲ್ಲೂಕಿನಲ್ಲಿ ಕುಮದ್ವತಿ ನದಿಗೆ ೧) ಯಲಿವಾಳ ೨) ರಟ್ಟಿಹಳ್ಳಿ ಮತ್ತು ೩) ಕುಡುವಲಿ ಗ್ರಾಮಗಳ ಹತ್ತಿರ ಬ್ಯಾರೇಜುಗಳನ್ನು ಕಟ್ಟಿಸಿ ಅಲ್ಲಿಯ ರೈತರುಗ ನೀರಾವರಿ ಅನುಕೂಲತೆ ಮಾಡಿಕೊಡಲು ಒತ್ತಾಯ ಇರುವುದು ಸರಕಾರದ ಗಮನಕ್ಕೆ ಬಂದಿದೆಯೇ?

ಆ) ೧೯೯೨-೯೩ನೇ ಸಾಲಿನ ಆಯವ್ಯಯದಲ್ಲಿ ಮೇಲ್ಕಾಣಿಸಿದ ಬ್ಯಾರೇಜ್ ನಿರ್ಮಾಣಕ್ಕೆ ಹಣ ಒದಗಿಸಲಾಗಿದೆಯೇ?

ಇ) ಯಾವ ಯಾವ ಬ್ಯಾರೇಜಿನ ನಿರ್ಮಾಣ ಮಾಡಲು ಸರಕಾರ ತೀರ್ಮಾನಿಸಿದೆ. ಅದಕ್ಕಾಗಿ ೧೯೯೨-೯೩ನೇ ಸಾಲಿನ ಆಯವ್ಯಯದಲ್ಲಿ ಒದಗಿಸಿದ ಹಣವೆಷ್ಟು?

ಶ್ರೀ ಕೆ. ಎಸ್. ಮಲ್ಲಿಕಾರ್ಜುನ ಪ್ರಸನ್ನ (ಸಣ್ಣ ನೀರಾವರಿ ರಾಜ್ಯ ಸಚಿವರು):-

ಅ) ಬಂದಿದೆ.

ಆ) ಈ ಯೋಜನೆಗಳು ತಾಂತ್ರಿಕವಾಗಿ ಹಾಗೂ ಆರ್ಥಿಕವಾಗಿ ಶಕ್ಯವೆಂದು ಕಂಡುಬಂದಲ್ಲಿ ೧೯೯೨-೯೩ನೇ ಸಾಲಿನಲ್ಲಿ ಒದಗಿಸಲಾಗುವುದು.

ಇ) ಮೇಲ್ಕಾಣಿಸಿದ ಬ್ಯಾರೇಜುಗಳು ಆರ್ಥಿಕವಾಗಿ ಹಾಗೂ ತಾಂತ್ರಿಕವಾಗಿ ಶಕ್ಯವಿದ್ದಲ್ಲಿ ನಿರ್ಮಾಣ ಮಾಡಲು ತೀರ್ಮಾನಿಸಲಾಗುವುದು. ೧೯೯೨-೯೩ನೇ ಸಾಲಿನಲ್ಲಿ ಹೊಸ ಕಾಮಗಾರಿಗಳಿಗೆ ಒಟ್ಟು ಮೊತ್ತ ೩೯೧.೬೬ ಲಕ್ಷ ರೂ.ಗಳನ್ನು ಒದಗಿಸಲಾಗಿದೆ.

ಹುಬ್ಬಳ್ಳಿಯಲ್ಲಿ ವಾಯುದೂತ್ ವಿಮಾನ ನಿಲ್ದಾಣ

೧೪೧೨ (೨೦೪೬) ಶ್ರೀ ಮಂಜುನಾಥ ಸಿ. ಕುನ್ನೂರ (ಶಿಗ್ಗಾಂವ್):- ಮಾನ್ಯ ಲೋಕೋಪಯೋಗಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ;

ಅ) ಹುಬ್ಬಳ್ಳಿಯಲ್ಲಿ ವಾಯುದೂತ್ ವಿಮಾನ ನಿಲ್ದಾಣ ಪ್ರಾರಂಭವಾಗಿದೆಯೇ?

ಆ) ಸದರಿ ನಿಲ್ದಾಣಕ್ಕಾಗಿ ರಾಜ್ಯ ಸರ್ಕಾರ ಹಾಗೂ ಕೇಂದ್ರ ಸರ್ಕಾರದಿಂದ ಎಷ್ಟು ಹಣ ಖರ್ಚು ಮಾಡಲಾಗಿದೆ?

ಇ) ಸದರಿ ವಿಮಾನ ನಿಲ್ದಾಣದಲ್ಲಿ ವಾಯುದೂತ್ ಸಂಚಾರ ಈವರೆಗೆ ಪ್ರಾರಂಭವಾಗದಿರುವುದಕ್ಕೆ ಕಾರಣಗಳೇನು?

ಈ) ಎಂದಿನಿಂದ ಸಂಚಾರವನ್ನು ಪ್ರಾರಂಭಿಸಲಾಗುವುದು?

ಶ್ರೀ ಜಿ. ಹೆಚ್. ಅಶ್ವತ್ಥ ರೆಡ್ಡಿ (ಲೋಕೋಪಯೋಗಿ ಮಂತ್ರಿಗಳು):-

ಅ) ಪ್ರಾರಂಭವಾಗಿತ್ತು.

ಆ) ಈ ಕಾಮಗಾರಿಯನ್ನು ರಾಜ್ಯ ಸರ್ಕಾರದ ನಿಧಿಯಿಂದ ತೆಗೆದುಕೊಳ್ಳಲಾಗಿದೆ. ಈ ವಿಮಾನ ನಿಲ್ದಾಣದ ನಿರ್ಮಾಣಕ್ಕಾಗಿ ೧೯೯೨ರ ಜನವರಿ ಅಂತ್ಯದವರೆಗೆ ೧೫೪೪.೩೧ ಲಕ್ಷ ರೂಪಾಯಿ ಖರ್ಚಾಗಿರುತ್ತದೆ ಹಾಗೂ ಈ ನಿಲ್ದಾಣ ವಿಸ್ತರಣೆಗಾಗಿ ೧೯೯೨ರ ಜನವರಿ ಅಂತ್ಯದವರೆಗೆ ೧೧೫.೮೪ ಲಕ್ಷ ರೂಪಾಯಿಗಳನ್ನು ಖರ್ಚು ಮಾಡಲಾಗಿರುತ್ತದೆ.

ಇ) ಈ ನಿಲ್ದಾಣದಲ್ಲಿ ಮೇ ೧೯೮೯ರಿಂದ ಡಿಸೆಂಬರ್ ೧೯೮೯ರವರೆಗೆ ಡಾರ್ನಿಯರ್ ವಿಮಾನದ ಸಂಚಾರವು ವಾಯುದೂತ್ ನಿಗಮದವರಿಂದ ನಡೆಸಲಾಗುತ್ತಿತ್ತು. ಈ ವಿಮಾನ ನಿಲ್ದಾಣದ ಬಳಿ ಇರುವ ೧೧೦ ಕಿ.ಹೈ. ವ್ಯಾಟ್ಸ್‌ನ ವಿದ್ಯುತ್ ತಂತಿಯಿಂದ ವಿಮಾನಯಾನಕ್ಕೆ ಅಡಚಣೆಯಾಗುವುದು ಹಾಗೂ ವಾಯುದೂತ್ ನಿಗಮದಲ್ಲಿ ವಿಮಾನಗಳ ಕೊರತೆಯಿದೆ, ಜನವರಿ ೧೯೯೨ರಲ್ಲಿ ಈ